## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
## ದಕ್ಷಿಣ ಕನ್ನಡ, ಮಂಗಳೂರು

## ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸವಿತ್ರ ತೇಜ್ ಪಿ.ಡಿ. | ಫ್ರಾಸಾಃ 8 |
| ತಂದೆಯ ಹೆಸರು | : | ಪಿ. ದೇವಿದಾಸ್ | ಚಾಸಾಃ 17 |
| ಪ್ರಾಯ | : | 43 ವರ್ಷ | ದಿನಾಂಕಃ 02.12.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವೃತ್ತ ನಿರೀಕ್ಷಕರು, ಬೈಂದೂರು ಪೊಲೀಸ್ ವೃತ್ತ | |
| ವಾಸಸ್ಥಳ | : | ಬೈಂದೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಜುಲೈ 2020ರಿಂದ ಮಾರ್ಚ್ 2022 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2) 07.09.2020ರಂದು ಪಿಎಸ್ಐ ನೀಡಿದ ದೂರನ್ನು ಪಡೆದು ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಈಗ ನೋಡಿದ ದೂರನ್ನು (ನಿಪಿ-1) ನಾನು ಸ್ವೀಕರಿಸಿದ್ದು ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ಪ್ರಥಮ ವರ್ತಮಾನ

ವರದಿಯನ್ನು (ನಿಪಿ-4) ನಾನು ದಾಖಲಿಸಿದ್ದು ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

3) ನಂತರ ಈ ಕುರಿತು ಡಿಸಿಪಿ ಇವರಿಗೆ ಮಾಹಿತಿ ನೀಡಿರುತ್ತೇನೆ. ಈಗ ನೋಡಿದ ಮಾಹಿತಿಯನ್ನು ನಾನು ನೀಡಿದ್ದು ಇದೆ. ಅದನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಾಳಿ ಸಮಯದಲ್ಲಿ ಹಾಜರಿರುವಂತೆ ಎಸಿಪಿ ಇವರಿಗೆ ಕೋರಿಕೆ ಪತ್ರ ಕಳುಹಿಸಿರುತ್ತೇನೆ. ಎಎಸ್ಐ ಮೂಲಕ ಪಂಚರನ್ನು (ಚಾಸಾ-2, 3) ಠಾಣೆಗೆ ಕರೆಯಿಸಿರುತ್ತೇನೆ. ಎಸಿಪಿ ಪಿಎಸ್ಐ ಮತ್ತು ಠಾಣಾ ಸಿಬ್ಬಂದಿಗಳ ಅಂಗಶೋಧನೆ ಮಾಡಿ ಮಹಜರ್ ತಯಾರಿಸಿರುತ್ತೇನೆ. ಈಗ ನೋಡಿದ ಮಹಜರನ್ನು (ನಿಪಿ-10) ನಾನು ತಯಾರಿಸಿದ್ದು ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಈಗ ನೋಡಿದ ನೋಟೀಸನ್ನು (ನಿಪಿ-5) ನಾನು ಪಂಚರಿಗೆ ನೀಡಿದ್ದು ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

4) ನಂತರ ಎಲ್ಲರೂ ಸೇರಿ ಶಿವಭಾಗ್ 5ನೇ ಕ್ರಾಸ್ ಹತ್ತಿರ 3.50 ಗಂಟೆಗೆ ಹೋಗಿರುತ್ತೇನೆ. 04.05 ಗಂಟೆಗೆ ಕೆಎ-19-ಇಝಡ್-2912 ಸ್ಕೂಟರ್ ಸವಾರ ಬಂದಿದ್ದು ಅವನನ್ನು ಹಿಡಿಯಲು ಹೋದಾಗ ಅವನು ಸ್ಕೂಟರ್ ನಿಂದ ಬಿದ್ದಿರುತ್ತಾನೆ. ಸ್ಕೂಟರ್ ನ ಫೂಟ್ ರೆಸ್ಟ್ ಹತ್ತಿರ ಇದ್ದ ಪ್ಯಾಕೆಟನ್ನು ತೆಗೆದು ಅವನು ಓಡಲು

ಪ್ರಾರಂಭಿಸಿದ್ದು ಅವನನ್ನು ಹಿಡಿದಿರುತ್ತೇವೆ. ಅವನನ್ನು ವಿಚಾರಿಸಿದಾಗ ಅವನು ತನ್ನ ಹೆಸರು, ವಿಳಾಸ ತಿಳಿಸಿರುತ್ತಾನೆ. ಪ್ಯಾಕೆಟ್‌ನಲ್ಲಿ ಗಾಂಜಾ ಇರುವುದನ್ನು ತಿಳಿಸಿರುತ್ತಾನೆ. ನಾನು ಕಲಂ 50 NDPS ಕಾಯ್ದೆಯಡಿಯಲ್ಲಿ ನೋಟೀಸ್ ನೀಡಿರುತ್ತೇನೆ. ಪತ್ರಾಂಕಿತ ಅಧಿಕಾರಿಯಿಂದ ಅಂಗಶೋಧನೆ ಮಾಡಬೇಕೆಂದು ಅವನು ತಿಳಿಸಿರುತ್ತಾನೆ. ಈಗ ನೋಡಿದ ನೋಟೀಸನ್ನು ನಾನು ನೀಡಿದ್ದು ಇದೆ. ಅದನ್ನು ನಿಪಿ–14 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು.

5) ಎಸಿಪಿ ಜಗದೀಶ್ ಗುರುತಿನ ಪತ್ರ ತೋರಿಸಿ ತಾನು ಪತ್ರಾಂಕಿತ ಅಧಿಕಾರಿ ಎಂದು ಆರೋಪಿಗೆ ಹೇಳಿರುತ್ತಾರೆ. ಆತನ ಅಂಗಶೋಧನೆ ಮಾಡಿದಾಗ ಕೈಯಲ್ಲಿದ್ದ ಕವರನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ ಗಮ್ ಟೇಪ್ ಸುತ್ತಿದ್ದ ಲಕೋಟೆ ಇದ್ದು ಅದರಲ್ಲಿ ಬೀಜ, ಒಣಹೂವು, ಎಲೆಯಿಂದ ಕೂಡಿದ ಗಾಂಜಾ ಇತ್ತು. ಅದನ್ನು ತೂಕ ಮಾಡಿದಾಗ 2.200 ಕೆಜಿ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹೊಲಿದು E ಎಂದು ಅರಗು ಸೀಲು ಹಾಕಿ ಪಂಚರ, ಎಸಿಪಿ ಮತ್ತು ನನ್ನ ಸಹಿ ಇರುವ ಚೀಟಿಯ ಅಂಟಿಸಿರುತ್ತೇನೆ. ಸ್ವತ್ತಿಗೆ A ಎಂದು ಗುರುತು ನೀಡಲಾಯಿತು. ಹಳದಿ ಬಣ್ಣದ ಪ್ಲಾಸ್ಟಿಕ್ ಕವರನ್ನು, ಆರೋಪಿಯ ವಶದಲ್ಲಿದ್ದ ಮೊಬೈಲನ್ನು ಮತ್ತು ಸ್ಕೂಟರನ್ನು ಸ್ವಾಧೀನ ಪಡಿಸಿಕೊಂಡಿರುತ್ತೇನೆ. ಸ್ವತ್ತು ಸ್ವಾಧೀನತಾ ಮಹಜರನ್ನು 4.15ರಿಂದ 6.15ರವರೆಗೆ ತಯಾರಿಸಿರುತ್ತೇನೆ. ಮಹಜರ್ (ನಿಪಿ–2) ನಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ–2(ಇ) ಎಂದು ಗುರುತಿಸಲಾಯಿತು.

6) ಇದಾದ ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆತಂದಿರುತ್ತೇನೆ. ವಶಪಡಿಸಿಕೊಂಡ ಸ್ವತ್ತನ್ನು ಸ್ವತ್ತು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಈಗ ನೋಡಿದ ಸ್ವತ್ತು ಪಟ್ಟಿಯನ್ನು ನಾನು ತಯಾರಿಸಿರುತ್ತೇನೆ. ಅದನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ದಸ್ತಗಿರಿ ಜ್ಞಾಪನ ಪತ್ರ ತಯಾರಿಸಿ ಕೊಟ್ಟಿರುತ್ತೇನೆ. ಅದನ್ನು ನಿಪಿ-16 ಎಂದು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

7) 08.09.2020ರಂದು ಈ ಪ್ರಕರಣದ ಕುರಿತು ವರದಿಯನ್ನು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ. ಈಗ ನೋಡಿದ ವರದಿಯನ್ನು ನಾನು ಕಳುಹಿಸಿದ್ದು ಇದೆ. ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಚಾಸಾ-1ರಿಂದ ಚಾಸಾ-10, ಚಾಸಾ-13 ಇವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-8ರಿಂದ 65ಬಿ ಸರ್ಟಿಫಿಕೇಟ್ (ನಿಪಿ-11) ಪಡೆದಿರುತ್ತೇನೆ. ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು.

8) 11.09.2020ರಂದು ಚಾಸಾ-14 ಇವರ ಹೇಳಿಕೆ ಪಡೆದಿರುತ್ತೇನೆ. 18.09.2020ರಂದು ಅರ್ಜಿ ಸಲ್ಲಿಸಿದ್ದು 23.10.2020ರಂದು ನ್ಯಾಯಾಲಯದಿಂದ ಆದೇಶ ಪಡೆದು 07.11.2020ರಂದು

ಸ್ವಾಧೀನಪಡಿಸಿಕೊಳ್ಳಲಾದ ವಸ್ತುವಿನಿಂದ ಇನ್ವೆಂಟರಿ ಮೂಲಕ ಸ್ಯಾಂಪಲ್ ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ-8 ಇವರು ಛಾಯಾ ಚಿತ್ರ ತೆಗೆದಿರುತ್ತಾರೆ. ಈ ಕುರಿತು ನ್ಯಾಯಾಧೀಶರಿಂದ ಇನ್ವೆಂಟರಿ ಸರ್ಟಿಫಿಕೇಟ್ ಪಡೆದಿರುತ್ತೇನೆ. ಈಗ ನೋಡಿದ ಸರ್ಟಿಫಿಕೇಟನ್ನು ನಾನು ಪಡೆದಿದ್ದು ಇದೆ. ಅದನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದ ಸರ್ಟಿಫಿಕೇಟ್‌ನೊಂದಿಗೆ ನಿಪಿ-18 ಎಂದು ಗುರುತಿಸಲಾಯಿತು. ಈಗ ನೋಡಿದ ಫೋಟೋಗಳನ್ನು ನ್ಯಾಯಾಧೀಶರ ಮುಂದೆ ತೆಗೆದಿದ್ದು ಇದೆ. ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

9) 13.11.2020ರಂದು ಸ್ಯಾಂಪಲ್ ಗಾಂಜಾವನ್ನು ಪರೀಕ್ಷೆಗಾಗಿ FSLಗೆ ಕಳುಹಿಸಿರುತ್ತೇನೆ. 15.11.2020ರಂದು ಚಾಸಾ-12 ಇವರ ಹೇಳಿಕೆ ಪಡೆದಿರುತ್ತೇನೆ. 12.08.2021ರಂದು FSL ವರದಿ ಪಡೆದಿರುತ್ತೇನೆ. ಈಗ ನೋಡಿದ ವರದಿಯನ್ನು (ನಿಪಿ-7) ನಾನು ಪಡೆದಿರುತ್ತೇನೆ.

10) 07.09.2020ರ ಠಾಣಾ ಜನರಲ್ ಡೈರಿಯ ಪ್ರತಿಯನ್ನು ತಯಾರಿಸಿರುತ್ತೇನೆ. ಈಗ ನೋಡಿದ ಠಾಣಾ ಜನರಲ್ ಡೈರಿಯ ಪ್ರತಿಯನ್ನು ನಿಪಿ-20 ಎಂದು ಗುರುತಿಸಲಾಯಿತು. ನಂತರ 13.09.2021 ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ.

11) 10.01.2022ರಂದು ನ್ಯಾಯಾಲಯದ ಆದೇಶದಂತೆ ಸ್ಕೂಟರನ್ನು ಮಹಜರ್ ಮೂಲಕ ಬಿಡುಗಡೆ ಮಾಡಿರುತ್ತೇನೆ. ಈಗ ನೋಡಿದ ಮಹಜರ್ ಮತ್ತು

ರಸೀದಿಯನ್ನು ನಿಪಿ-21 ಮತ್ತು ನಿಪಿ-22 ಎಂದು ಗುರುತಿಸಲಾಯಿತು. ಚಾಸಾ-14 ಆರೋಪಿಯ ತಾಯಿ ಇರುತ್ತಾರೆ. ಈಗ ನೋಡಿದ ಮೊಬೈಲ್, ಪಾಲಿಥೀನ್ ಬ್ಯಾಂಗ್, ಗಾಂಜಾ (ಮುಮಾ-1ರಿಂದ 3) ನಾನು ವಶಪಡಿಸಿಕೊಂಡಿದ್ದು ಇದೆ. ಈಗ ನೋಡಿದ ಫೋಟೋದಲ್ಲಿ (ನಿಪಿ-3) ಕಾಣುವ ವಾಹನವನ್ನು ನಾನು ಬಿಡುಗಡೆ ಮಾಡಿದ್ದು ಇದೆ. ನ್ಯಾಯಾಲಯದಲ್ಲಿರುವ ಆರೋಪಿಯನ್ನು ನಾನು ದಸ್ತಗಿರಿ ಮಾಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ

12) ದಾಳಿ ನಡೆಸಲು ಠಾಣೆಯಿಂದ ಹೊರಟಾಗ 3.30ಗಂಟೆ ಆಗಿತ್ತು. ದಾಳಿ ನಡೆಸಲು ನಾನು ಕಳುಹಿಸಿದ್ದ ಮನವಿ ಪತ್ರಕ್ಕೆ ಡಿಸಿಪಿ ಇವರು ಲಿಖಿತವಾಗಿ ಅನುಮತಿ ಕಳುಹಿಸಿದ್ದು ಇರುವುದಿಲ್ಲ. ಪಿಎಸ್ಐ ದೂರುಕೊಡುವಾಗ ತಮಗೆ ಬಂದ ಮಾಹಿತಿಯ ಸ್ಥಳ ಶಿವಭಾಗ್ ಎಂದು ತಿಳಿಸಿರುತ್ತಾರೆ. ಎಸಿಪಿ ಇವರಿಗೆ ಕದ್ರಿ ಶಿವಭಾಗಕ್ಕೆ ಬರಬೇಕು ಎಂದು ನಾನು ಕಳುಹಿಸಿದ ಕೋರಿಕೆ ಪತ್ರದಲ್ಲಿ ನಮೂದಿಸಿದ್ದು ಇರುವುದಿಲ್ಲ. ಸ್ವತ್ತು ಸ್ವಾಧೀನತಾ ಮಹಜರ್ (ನಿಪಿ-2) ಇದರಲ್ಲಿ ಸ್ವಾಧೀನಪಡಿಸಿಕೊಂಡ ಗಾಂಜಾ ಹಸಿ ಗಾಂಜಾ ಇತ್ತೋ ಅಥವಾ ಒಳ ಗಾಂಜಾ ಇತ್ತೋ ಅನ್ನುವುದನ್ನು ನಮೂದಿಸಿಲ್ಲ.

13) 07.09.2020ರಂದು 04.00 ಗಂಟೆಗೆ ನಾನು ಠಾಣೆಯಲ್ಲಿ ಇರಲಿಲ್ಲ. ಠಾಣಾ ಜನರಲ್ ಡೈರಿಯ 24ನೇ ಕಾಲಂ ನಲ್ಲಿ ಆರೋಪಿಯನ್ನು ಯಾವ

ಸಮಯದಲ್ಲಿ ಬಂಧನ ಮಾಡಲಾಗಿದೆ ಅನ್ನುವುದು ನಮೂದಾಗಿದೆ. ಘಟನಾ ಸ್ಥಳದ ಹತ್ತಿರ ಆರೋಪಿ ಬಂದಾಗ 4.05 ಗಂಟೆ ಆಗಿದೆ. ಗಾಂಜಾ ಸ್ವಾಧೀನಪಡಿಸಿಕೊಂಡಾಗಿನಿಂದ ಇನ್ವೆಂಟರಿ ಮಾಡಿ ಸ್ಯಾಂಪಲ್ ತೆಗೆದುಕೊಳ್ಳುವವರೆಗೆ ಅದು ನನ್ನ ಸ್ವಾಧೀನದಲ್ಲಿಯೇ ಇತ್ತು. 07.11.2020ರಂದು ಸ್ಯಾಂಪಲನ್ನು FSL ಗೆ ಕಳುಹಿಸಲಾಗಿತ್ತು.

14) ಘಟನಾ ಸ್ಥಳದಿಂದ ವಶಪಡಿಸಿಕೊಳ್ಳಲಾದ ವಾಹನವನ್ನು ಸಾಯಂಕಾಲ 6.45ಕ್ಕೆ ಠಾಣೆಗೆ ತರಲಾಗಿದೆ. ಠಾಣೆಯಲ್ಲಿರುವ ಪ್ರಿಂಟರ್ ಮೂಲಕ ಫೋಟೋ ಪ್ರಿಂಟ್ ಹಾಕಲು ಬರುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಈ ಪ್ರಕರಣದ ಫೋಟೋಗಳನ್ನು ಠಾಣೆಯಲ್ಲಿ ಪ್ರಿಂಟ್ ತೆಗೆಯಲಾಗಿದೆ. ಮುಮಾ-1ರ ಮೊಬೈಲ್ ಯಾವ ಮೋಡಲ್‌ದು ನನಗೆ ನೆನಪಿರುವುದಿಲ್ಲ. ಸ್ಥಳೀಯರನ್ನು ಸಾಕ್ಷಿದಾರರನ್ನಾಗಿ ಕರೆದಿರುವುದಿಲ್ಲ. ಆ ಸಮಯದಲ್ಲಿ ಕೋವಿಡ್ ಇದ್ದುದರಿಂದ ಜನರು ತಿರುಗಾಡುತ್ತಿರಲಿಲ್ಲ.

15) ತೊಕ್ಕೊಟ್ಟುನಿಂದ ಕದ್ರಿ ಶಿವಭಾಗ್ ರಸ್ತೆಯಲ್ಲಿ 5ನೇ ಕ್ರಾಸ್ ಒಳರಸ್ತೆ ಹತ್ತುವುದಿಲ್ಲ. ಕದ್ರಿ ಶಿವಭಾಗ್ 5ನೇ ಕ್ರಾಸ್ ಹತ್ತಿರ ಹೋಗಿಲ್ಲ, ಅಲ್ಲಿ ಯಾರೂ ಬಂದಿಲ್ಲ ಮತ್ತು ಯಾವುದೇ ವಸ್ತುವನ್ನು ಸ್ವಾಧೀನಪಡಿಸಿಕೊಂಡಿಲ್ಲ ಅನ್ನುವುದು ಸರಿಯಲ್ಲ. ಠಾಣೆಯಲ್ಲಿ ಪರಸ್ಪರ ಅಂಗಶೋಧನಾ ಮಹಜರ್ ತಯಾರಿಸಿಲ್ಲ ಅನ್ನುವುದು ಸರಿಯಲ್ಲ. ಸ್ವತ್ತು ಸ್ವಾಧೀನತಾ ಮಹಜರನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ

ಅನ್ನುವುದು ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ಹೇಳುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.